ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಶುಕ್ರವಾರ, ೧೯, ಜೂನ್, ೨೦೨೬ (ಜ್ಯೇಷ್ಠ, ೨೯, ಶಕವರ್ಷ, ೧೯೪೮)	ಸಂಚಿಕೆ ೧೧೮
Volume - 161	BENGALURU, FRIDAY, 19, JUNE, 2026 (JYAISTHA , 29, SHAKAVARSHA, 1948)	Issue 118

ಭಾಗ ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

PROCEEDINGS OF THE GOVERNMENT OF KARNATAKA

Subject: Nomination of KPTCL as Nodal Agency for InSTS projects executed under TBCB process - reg

Read: 1. G.O.: ENERGY 73 PPT 2024 dated 20.01.2025
2. PCKL letter No.: PCKL/A12/7/2025-26/854-60 dated 12.05.2026

*****

Preamble: -

In the Government Order read at (1) above, the modalities for taking-up Intra State Transmission System (InSTS) projects in the State under the Tariff Based Competitive Bidding (TBCB) process are prescribed. In the said order, Power Company of Karnataka Limited (PCKL) is designated as the Nodal Agency for execution of the Transmission Service Agreement (TSA) with the Transmission Service Providers (TSP). PCKL is also entrusted with co-ordination and project monitoring activities during the implementation phase.

In the letter read at (2) above, the Managing Director, PCKL has stated that PCKL is mainly engaged in trading activities on behalf of ESCOMs and does not have any independent revenue stream for providing payment security mechanism as required under TSA. The activities such as connectivity, monitoring the network access is being carried out by State Transmission Utility (STU) in the State. KPTCL, as State Transmission Utility (STU) is having strong established organizational set-up across the State and is appropriate for project monitoring & co-ordination of TBCB projects. Further, it is also stated that neighbouring States namely Maharashtra and Tamil Nadu have nominated their STU as Nodal Agency for InSTS TBCB projects.

The Managing Director, PCKL has therefore proposed that STU/KPTCL be nominated as Nodal Agency in place of PCKL.

Government has examined the proposal, hence the following order.

GOVERNMENT ORDER NO. ENERGY 73 PPT 2024,
BANGALORE, DATED: 21.05.2026

Under the circumstances explained in the preamble, Government is pleased to nominate **Karnataka Power Transmission Corporation Limited (KPTCL)/STU** as "**Nodal Agency**" for all Intra State Transmission System (InSTS) projects of Karnataka executed under Tariff Based Competitive Bidding (TBCB) process in lieu of PCKL.

KPTCL shall discharge the roles and responsibilities prescribed for the Nodal Agency in the Government Order ENERGY 73 PPT 2024 dated 20.01.2025. KPTCL shall approach KERC for recovery of transmission charges from ESCOMs/LTTCs through tariff orders.

The Government Order ENERGY 73 PPT 2024 dated 20.01.2025 shall stand amended to the above extent. All other terms and conditions of the said order, except those already amended, shall remain unaltered.

BY ORDER AND IN THE NAME OF
GOVERNOR OF KARNATAKA

(**SHANTHARAMA**)
UNDER SECRETARY TO GOVERNMENT
ENERGY DEPARTMENT

PR-214

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್, ಬೆಂಗಳೂರು ಈ ಸಂಘಕ್ಕೆ ಕರ್ನಾಟಕ ಸಂಘಗಳ ನೋಂದಣಿ ಆಧಿನಿಯಮ-1960ರ ಕಲಂ 27(ಎ) ರನ್ವಯ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ :-

1. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಪತ್ರ ಸಂಖ್ಯೆ:ಆರ್‌ಸಿಎಸ್/ಸಂಘ ಸಂಸ್ಥೆ-02/273/2024-25, ದಿನಾಂಕ:28.01.2026.
2. ಸರ್ಕಾರದ ನೋಟಿಸ್ ಸಂಖ್ಯೆ:ಸಿಒ 45 ಸಿಎಸ್‌ಆರ್ 2026, ದಿನಾಂಕ:10.03.2026.
3. ಅಧ್ಯಕ್ಷರು, ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್ ಮಾಲೀಕರ ಸಂಘ(ರಿ), ಇವರ ಲಿಖಿತ ಸಮಜಾಯಿಷಿ ದಿನಾಂಕ:25.03.2026 ಮತ್ತು 07.05.2026
4. ರಿಟ್ ಅರ್ಜಿ ಸಂಖ್ಯೆ:9916/2026ರಲ್ಲಿ ದಿನಾಂಕ:01.04.2026ರಂದು ನೀಡಿರುವ ತೀರ್ಪು.

*****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ (1)ರ ಪತ್ರದಲ್ಲಿ ಕೇಂದ್ರಿಯ ವಿಹಾರ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್, ಯಲಹಂಕ, ಬೆಂಗಳೂರು ಈ ಸಂಘದ ವಿರುದ್ಧ ಸ್ವೀಕೃತವಾದ

ದೂರು ಅರ್ಜಿಯ ಕುರಿತು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 25 ರಡಿ ವಿಚಾರಣೆ ನಡೆಸಲು ವಿಚಾರಣಾಧಿಕಾರಿಯನ್ನು ನೇಮಿಸಿದ್ದು, ವಿಚಾರಣಾಧಿಕಾರಿಗಳು ದೂರು ಅರ್ಜಿಗಳಲ್ಲಿನ ಅಂಶಗಳ ಬಗ್ಗೆ ವಿಚಾರಣೆ ಜರುಗಿಸಿ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಶ್ರೀಮತಿ ಮಾಲಾಮೂರ್ತಿ, ಸಂಘದ ಸಿಬ್ಬಂದಿ ಇವರಿಂದ 2020 ರ ಅವಧಿಯ ಲೆಕ್ಕದಲ್ಲಿ ವ್ಯತ್ಯಾಸವಾಗಿರುವ ರೂ.1.29 ಲಕ್ಷ ವಸೂಲಿಗೆ ಅಗತ್ಯ ಕ್ರಮವಿಡಲು ಸೂಚಿಸಲಾಗಿದ್ದರೂ ಸಹಾ ತಹಲ್‌ವರೆಗೆ ಸದರಿ ಮೊತ್ತವು ವಸೂಲಾತಿ ಆಗಿರುವುದಿಲ್ಲವೆಂದು ಹಾಗೂ ಕಾಯ್ದೆ ಕಲಂ-11 ರಂತೆ ವಿಶೇಷ ಸರ್ವ ಸದಸ್ಯರ ಸಭೆ ನಡೆಸಿ, ಲೆಕ್ಕಪತ್ರಗಳಿಗೆ ಅನುಮೋದನೆ ಪಡೆದು ಕಾರ್ಯಕಾರಿ ಸಮಿತಿ ಪಟ್ಟಿ, ಸರ್ವ ಸದಸ್ಯರ ಪಟ್ಟಿ ಹಾಗೂ ನಡವಳಿಯೊಂದಿಗೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 13 ರಂತೆ ಲೆಕ್ಕಪತ್ರಗಳನ್ನು ಸಕಾಲದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲವೆಂದು ಹಾಗೂ ಪ್ರಸ್ತುತ ಕಾರ್ಯಕಾರಿ ಸಮಿತಿಯ ಅವಧಿಯು ಸಹ ಮುಕ್ತಾಯಗೊಂಡಿರುವುದರಿಂದ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 11, 12 ಮತ್ತು 13 ಗಳು ಉಲ್ಲಂಘನೆಯಾಗಿರುವುದರಿಂದ ಹಾಗೂ ಅಡಳಿತ ಮಂಡಳಿಯ ಅವಧಿಯು ಮುಕ್ತಾಯಗೊಂಡಿರುವುದರಿಂದ ಸಂಘಕ್ಕೆ ಸಂಘದ ಬೈಲಾ ರೀತ್ಯಾ ನಿಯಮಾನುಸಾರ ಚುನಾವಣೆಯನ್ನು ಜರುಗಿಸಲು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ರ ಕಲಂ 27(ಎ) ರನ್ವಯ ಆಡಳಿತಾಧಿಕಾರಿಯನ್ನು ನೇಮಿಸಬಹುದೆಂದು ಅಭಿಪ್ರಾಯಪಟ್ಟು ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳು, 1 ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರು ಸಲ್ಲಿಸಿರುವ ಪ್ರಸ್ತಾವೆಯನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಪ್ರಸ್ತಾವನೆಯನ್ನು ಪರಿಶೀಲಿಸಿ, ಮೇಲೆ ಓದಲಾದ ಕ್ರಮಾಂಕ(2) ರನ್ವಯ ಕೇಂದ್ರಿಯ ವಿಹಾರ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್, ಯಲಹಂಕ, ಬೆಂಗಳೂರು ಈ ಸಂಘದ ಅಧ್ಯಕ್ಷರು/ಕಾರ್ಯದರ್ಶಿಯವರಿಗೆ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960 ರ ಕಲಂ 27(ಎ) ರನ್ವಯ ಸಂಘಕ್ಕೆ ಆಡಳಿತಾಧಿಕಾರಿಯನ್ನು ಏಕೆ ನೇಮಿಸಬಾರದು? ಎಂಬ ಬಗ್ಗೆ ಕಾರಣ ಕೇಳಿ ನೋಟೀಸ್ ನೀಡಿ, ಲಿಖಿತ ಸಮಜಾಯಿಷಿಯನ್ನು ಸಲ್ಲಿಸಲು 15 ದಿನಗಳ ಕಾಲಾವಕಾಶವನ್ನು ನೀಡಲಾಗಿರುತ್ತದೆ.

ಸರ್ಕಾರದ ದಿನಾಂಕ:10.03.2026ರ ನೋಟಿಸ್‌ನ್ನು ಪ್ರಶ್ನಿಸಿ ಮಾನ್ಯ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:9916/2026ನ್ನು ದಾಖಲಿಸಿದ್ದು, ಮೇಲೆ ಓದಲಾದ ಕ್ರಮಾಂಕ (3) ರಲ್ಲಿ ಮಾನ್ಯ ನ್ಯಾಯಾಲಯವು ಈ ಕೆಳಕಂಡಂತೆ ನಿರ್ದೇಶನವನ್ನು ನೀಡಿರುತ್ತದೆ.

> 4. In that view of the matter, without expressing any opinion on the merits of the case, it is open for the petitioner to file a detailed comprehensive reply to the notice dated 10.03.2026 and if such a reply is filed by the petitioner-Association within two (2) weeks from receipt of this order by the petitioner, the same shall be considered by respondent No.1 State within two (2) months from the date of receipt of the reply that may be filed by the petitioner-Association.
>
> 5. It is also made clear that since the grievance of the petitioner-Association is that, they have not been heard in the matter, it is directed

that till the consideration of the said reply that may be filed by the petitioner-Association, respondent No.1 State shall not take any -decision as to the appointment of the Administrator.

ಮೇಲೆ ಓದಲಾದ ಕ್ರಮಾಂಕ(4)ರ ಪತ್ರದಲ್ಲಿ ಸಂಘದ ಅಧ್ಯಕ್ಷರು, ಲಿಖಿತ ಸಮಜಾಯಿಷಿಯನ್ನು ಸಲ್ಲಿಸಿ, 2022-23 ನೇ ಸಾಲಿನಿಂದ 2024-25ನೇ ಸಾಲಿನವರೆಗೆ ಅಡಿಟ್ ವರದಿಯನ್ನು ಉಪ ನಿಬಂಧಕರಿಗೆ ಸಲ್ಲಿಸಿರುವುದಾಗಿ, ಹಾಗೂ ಸಂಘದ ವಿರುದ್ಧ ಮಾಡಿರುವ ಆರೋಪಗಳು ಸಂಪೂರ್ಣವಾಗಿ ಕಾಲ್ಪನಿಕ ಸ್ವರೂಪದ್ದಾಗಿದ್ದು, ಯಾವುದೇ ಸಾಕ್ಷ್ಯ/ ಪುರಾವೆಗಳು ಅಥವಾ ಆಧಾರಗಳನ್ನು ಒದಗಿಸಲಾಗಿಲ್ಲ. ದೂರುದಾರರಲ್ಲಿ ಒಬ್ಬರಾದ ಶ್ರೀ ಸುನೀಲ ಹೆಬ್ಬಿ ಅವರು ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಹಲವಾರು ದೂರುಗಳನ್ನು ಸಲ್ಲಿಸುವ ಮೂಲಕ ಸಂಘದಲ್ಲಿ ಭಯ ಮತ್ತು ಅಶಾಂತಿಯ ವಾತಾವರಣವನ್ನು ನಿರಂತರವಾಗಿ ಸೃಷ್ಟಿಸುತ್ತಿದ್ದಾರೆ. ಇದಲ್ಲದೆ, ಅದೇ ವ್ಯಕ್ತಿಯು ಮುಂದೆ ಹೋಗಿ ನಿರ್ವಹಣಾ ಸಮಿತಿಯ ಸದಸ್ಯರು ಮತ್ತು ಇತರ ನಿವಾಸಿಗಳ ವಿರುದ್ಧ ಎಂಟು ಎಫ್ಐಆರ್‌ಗಳನ್ನು ದಾಖಲಿಸಿದ್ದು, ಯಾವುದೇ ಪುರಾವೆಗಳಿಲ್ಲದೆ ಅನಗತ್ಯ ತೊಂದರೆ ಮತ್ತು ಆಡಳಿತಾತ್ಮಕ ಹೊರೆಯನ್ನು ಉಂಟುಮಾಡುತ್ತಿದ್ದಾರೆ. ಹಿಂದಿನ ಎಒ ಶ್ರೀಮತಿ ಮಾಲಾ ಮೂರ್ತಿ ಅವರಿಂದ 1.29 ಲಕ್ಷ ರೂಪಾಯಿಗಳನ್ನು ವಸೂಲಿ ಮಾಡಲು ನಿರ್ವಹಣಾ ಸಮಿತಿಯು ಎಲ್ಲಾ ಸಂಭಾವ್ಯ ಕ್ರಮಗಳನ್ನು ತೆಗೆದುಕೊಂಡಿದೆ. ನಾನ್-ಕಾಗ್ನಿಜೇಬಲ್ ಕಂಪ್ಲೇಂಟ್ (ಎನ್‌ಸಿಸಿ/ಎನ್‌ಸಿಆರ್) ಸಲ್ಲಿಸಲಾಗಿದೆ. ಚುನಾವಣಾ ಪ್ರಕ್ರಿಯೆಯನ್ನು ಅಕ್ಟೋಬರ್ 2024 ರಲ್ಲಿ ಪ್ರಾರಂಭಿಸಲಾಯಿತು ಅಕ್ಟೋಬರ್ 2024 ರಲ್ಲಿ ಸಂಭವಿಸಿದ ತೀವ್ರ ಪ್ರವಾಹವು ದಾಖಲೆಗಳ ನಷ್ಟ ಸೇರಿದಂತೆ ವ್ಯಾಪಕ ಹಾನಿಯನ್ನುಂಟುಮಾಡಿತು, ಆದ್ದರಿಂದ, ಔಪಚಾರಿಕವಾಗಿ 6 ತಿಂಗಳ ವಿಸ್ತರಣೆಯನ್ನು ಕೋರಲಾಯಿತು ನಂತರ, ನನ್ನ ತಾಯಿಯ ಹಠಾತ್ ನಿಧನದಿಂದ ಚುನಾವಣೆಗಳನ್ನು ನಡೆಸಲು ಸಾಧ್ಯವಾಗಲಿಲ್ಲ. ಶ್ರೀ ಸುನೀಲ ಹೆಬ್ಬಿ(ದೂರುದಾರರು) ಸೆಪ್ಟೆಂಬರ್ 2023 ರಿಂದ ನಿರ್ವಹಣೆಗೆ ಹಣ ಪಾವತಿಸಿಲ್ಲ ಮತ್ತು ಯೋಜನಾ ನಿಧಿಗೆ ಕೊಡುಗೆ ನೀಡಿಲ್ಲ ಇಲ್ಲಿಯವರೆಗೆ ಒಟ್ಟು ಬಾಕಿ ಮೊತ್ತ ಸುಮಾರು ರೂ.1,20,000/-ಗಳನ್ನು ನೀಡಬೇಕಾಗಿರುತ್ತದೆ. ಸಂಘವು ಪಾರದರ್ಶಕ ಟೆಂಡರ್ ಕಾರ್ಯವಿಧಾನಗಳನ್ನು ಅನುಸರಿಸಿ ನಿಯಮಾನುಸಾರ ಎಲ್ಲಾ ಕ್ರಮಗಳನ್ನು ವಹಿಸಲಾಗಿದೆ. ಮತ್ತು ಈಗ ನಡೆಯುತ್ತಿರುವ ಕಾಮಗಾರಿಗಳು 3 ತಿಂಗಳಲ್ಲಿ ಮುಕ್ತಾಯಗೊಳ್ಳಲಿವೆ. ಸಂಘವು ಎದುರಿಸಿದ ಅಸಾಧಾರಣ ಸಂದರ್ಭಗಳನ್ನು ಗಣನೆಗೆ ತೆಗೆದುಕೊಂಡು, ಅರ್ಹತೆಯ ಆಧಾರದ ಮೇಲೆ ವಿಷಯವನ್ನು ಪರಿಗಣಿಸಿ ಪ್ರಸ್ತುತ ಅಸ್ತಿತ್ವದಲ್ಲಿರುವ ನಿರ್ವಹಣಾ ಸಮಿತಿಯು ಕಾರ್ಯನಿರ್ವಹಿಸುವುದನ್ನು ಮುಂದುವರಿಸಲು ಅವಕಾಶ ಕಲ್ಪಿಸಿ ಆಡಳಿತಾಧಿಕಾರಿಯನ್ನು ನೇಮಿಸುವ ಪ್ರಕ್ರಿಯೆಯನ್ನು ಕೈಬಿಡುವಂತೆ ಕೋರಿರುತ್ತಾರೆ.

ಸಹಕಾರ ಸಂಘಗಳ ಉಪ ನಿಬಂಧಕರು, 1ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಮಾನ್ಯ ನ್ಯಾಯಾಲಯದ ಆದೇಶದಂತೆ ಸಂಘದ ಅಧ್ಯಕ್ಷರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಗಣಿಸಲಾಗಿದ್ದು, ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್, ಬೆಂಗಳೂರು ಇವರು 2020 ರ ಅವಧಿಯ ಲೆಕ್ಕದಲ್ಲಿ ವ್ಯತ್ಯಾಸವಾಗಿರುವ ರೂ.1.29 ಲಕ್ಷ ವಸೂಲಿಗೆ ಅಗತ್ಯ ಕ್ರಮವಿಡಲು ಸೂಚಿಸಲಾಗಿದ್ದರೂ ಸಹ ಇಲ್ಲಿಯವರೆಗೂ ಸದರಿ ಮೊತ್ತವು ವಸೂಲಾತಿ ಆಗಿರುವುದಿಲ್ಲ ಮತ್ತು ಸಂಘದ ಆಡಳಿತ ಮಂಡಳಿಯ ಅವಧಿಯು ಮುಗಿದಿರುವುದರಿಂದ ಸಂಘದ ಆಡಳಿತ ಮಂಡಳಿಯು ಅನಧಿಕೃತವಾಗಿ ಮುಂದುವರೆಯವುದು ಸಂಘದ ಬೈಲಾ ಮತ್ತು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ನಿಯಮಗಳಿಗೆ ವಿರುದ್ಧವಾಗಿರುವುದರಿಂದ ಸದರಿ ಸಂಘದ ಅಧ್ಯಕ್ಷರ ಸಮಜಾಯಿಷಿಯನ್ನು

ತಿರಸ್ಕರಿಸಿ ಸಂಘದಲ್ಲಿನ ನ್ಯೂನತೆಗಳನ್ನು ಸರಿಪಡಿಸಲು ಮತ್ತು ಸಂಘಕ್ಕೆ ಚುನಾವಣೆ ನಡೆಸಲು ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲ 27(ಎ)ರನ್ವಯ ಆಡಳಿತಾಧಿಕಾರಿಯನ್ನಾಗಿ ಶ್ರೀ ಸೋಮಶೇಖರಯ್ಯ, ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, 1 ನೇ ವಲಯ ಬೆಂಗಳೂರು ಇವರನ್ನು ನೇಮಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 45 ಸಿಎಸ್‌ಆರ್ 2026

ಬೆಂಗಳೂರು, ದಿನಾಂಕ: 04ನೇ ಜೂನ್ 2026.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ-1960ರ ಕಲಂ-27(ಎ) ರನ್ವಯ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್ ಓನರ್ಸ್ ಅಸೋಷಿಯೇಷನ್, ಯಲಹಂಕ, ಬಳ್ಳಾರಿ ರಸ್ತೆ, ಬೆಂಗಳೂರು ಈ ಸಂಘಕ್ಕೆ ಶ್ರೀ ಸೋಮಶೇಖರಯ್ಯ, ಸಹಕಾರ ಅಭಿವೃದ್ಧಿ ಅಧಿಕಾರಿ, ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ, 1 ನೇ ವಲಯ ಬೆಂಗಳೂರು ಇವರನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ 06 ತಿಂಗಳ ಅವಧಿಗೆ ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ಆಡಳಿತಾಧಿಕಾರಿಯು ಕೂಡಲೇ ಸಂಘದ ಪ್ರಭಾರ ವಹಿಸಿಕೊಂಡು, ಸಂಘದ ನ್ಯೂನತೆಗಳನ್ನು ಸರಿಪಡಿಸಿ, ಆಡಳಿತ ಮಂಡಳಿಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸಿ, ಸರ್ಕಾರಕ್ಕೆ ವರದಿ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಂಗನಾಥ.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

PR-215

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಿನಾಂಕ: 01-04-2006ರ ಪೂರ್ವದಲ್ಲಿನ ನೇಮಕಾತಿ ಅಧಿಸೂಚನೆ ಮೂಲಕ ಆಯ್ಕೆ ಹೊಂದಿ ಆ ದಿನಾಂಕದಂದು ಅಥವಾ ನಂತರದಲ್ಲಿ ರಾಜ್ಯ ಸರ್ಕಾರದ ಸೇವೆಗೆ ಸೇರಿದ ನೌಕರರನ್ನು ಹಿಂದಿನ ಡಿಫೈನ್ಡ್ ಪೆಂಚಣಿ ಯೋಜನೆಗೆ ಒಳಪಡಿಸುವ ಕುರಿತು

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/99/2023, ದಿನಾಂಕ: 24-01-2024
2) ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/99/2023, ದಿನಾಂಕ: 14-02-2025 ಮತ್ತು 13-10-2025

ಪ್ರಸ್ತಾವನೆ:

ದಿನಾಂಕ: 01-04-2006ರ ಪೂರ್ವದಲ್ಲಿನ ನೇಮಕಾತಿ ಅಧಿಸೂಚನೆಗಳ ಮೂಲಕ ಆಯ್ಕೆ ಹೊಂದಿ ಆ ದಿನಾಂಕದಂದು ಅಥವಾ ನಂತರದಲ್ಲಿ ರಾಜ್ಯ ಸರ್ಕಾರದ ಸೇವೆಗೆ ಸೇರಿದ ನೌಕರರನ್ನು ಹಿಂದಿನ ಡಿಫೈನ್ಡ್ ಪೆಂಚಣಿ ಯೋಜನೆಗೆ ಒಳಪಡಿಸಲು ಸರ್ಕಾರವು ಒಪ್ಪಿಗೆಯನ್ನು ನೀಡಿ ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಆದೇಶವನ್ನು ಹೊರಡಿಸಲಾಗಿರುತ್ತದೆ. ಈ ಆದೇಶದ

ವ್ಯಾಪ್ತಿಗೊಳಪಡುವ ಸರ್ಕಾರಿ ನೌಕರರಿಂದ ದಿನಾಂಕ: **30-06-2024** ರೊಳಗೆ ಅಭಿಮತವನ್ನು ಪಡೆದು ಕ್ರೋಢೀಕೃತ ಪ್ರಸ್ತಾವನೆಯನ್ನು ಸರ್ಕಾರದ ಪರಿಶೀಲನೆಗಾಗಿ ಸಲ್ಲಿಸುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ನಿರ್ದೇಶನ ನೀಡಲಾಗಿದೆ.

ಮುಂದುವರೆದು, ದಿನಾಂಕ: **24-01-2024**ರ ಸರ್ಕಾರಿ ಆದೇಶದನ್ವಯ ಡಿಫೈನ್ಡ್ ಪಿಂಚಣಿ ಯೋಜನೆ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಅಧಿಕಾರಿ / ನೌಕರರ ಎನ್.ಪಿ.ಎಸ್ ಪ್ರಾನ್ ಖಾತೆಯಲ್ಲಿ ಜಮೆಯಾಗಿರುವ ಸರ್ಕಾರದ ಹಾಗೂ ನೌಕರರ ವಂತಿಗೆಗಳನ್ನು ಹಿಂಪಡೆದು ಇತ್ಯರ್ಥಪಡಿಸಲು ಮೇಲೆ ಓದಲಾದ ಕ್ರಮ ಸಂಖ್ಯೆ: **(2)**ರ ಆದೇಶದಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಅದರಂತೆ, ದಿನಾಂಕ: **24-01-2024**ರ ಸರ್ಕಾರಿ ಆದೇಶದನ್ವಯ ಸಂಬಂಧಿತ ಅಧಿಕಾರಿ / ನೌಕರರು ಚಲಾಯಿಸಿದ ಅಭಿಮತವನ್ನು ಪರಿಶೀಲಿಸಿದ ಸರ್ಕಾರವು ದಿನಾಂಕ: **01-04-2006**ರ ಪೂರ್ವದಲ್ಲಿನ ನೇಮಕಾತಿ ಅಧಿಸೂಚನೆಗಳ ಮೂಲಕ ಆಯ್ಕೆ ಹೊಂದಿ ಆ ದಿನಾಂಕದಂದು ಅಥವಾ ನಂತರದಲ್ಲಿ ರಾಜ್ಯ ಸರ್ಕಾರದ ಸೇವೆಗೆ ಸೇರಿದ ಖಜಾನೆ ಇಲಾಖೆಯ ರಾಷ್ಟ್ರೀಯ ಪಿಂಚಣಿ ಯೋಜನೆಗೊಳಪಟ್ಟ ಡಾ: ಮೋನಪ್ಪ ಸಾಯಬಣ್ಣ ಸಿರವಾಳ, ಸಹಾಯಕ ಖಜಾನಾಧಿಕಾರಿ ಇವರನ್ನು ಹಳೆಯ ಡಿಫೈನ್ಡ್ ಪಿಂಚಣಿ ಯೋಜನೆಗೆ ಒಳಪಡಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಆಇ 162 ಆಖಇ 2025, ದಿನಾಂಕ: 24-04-2026</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ರಾಷ್ಟ್ರೀಯ ಪಿಂಚಣಿ ಯೋಜನೆಗೊಳಪಟ್ಟ ಖಜಾನೆ ಇಲಾಖೆಯ ಈ ಕೆಳಕಂಡ ಅಧಿಕಾರಿಯು ದಿನಾಂಕ: **01-04-2006**ರ ಪೂರ್ವದಲ್ಲಿ ನೇಮಕಾತಿ ಅಧಿಸೂಚನೆಗಳ ಮೂಲಕ ಆಯ್ಕೆ ಹೊಂದಿ ಆ ದಿನಾಂಕದಂದು ಅಥವಾ ನಂತರದಲ್ಲಿ ರಾಜ್ಯ ಸರ್ಕಾರದ ಸೇವೆಗೆ ಸೇರಿರುವುದರಿಂದ ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/99/2023, ದಿನಾಂಕ: 24-01-2024 ರನ್ವಯ ಅವರನ್ನು ಡಿಫೈನ್ಡ್ ಪಿಂಚಣಿ ಯೋಜನೆಯ ವ್ಯಾಪ್ತಿಗೊಳಪಡಿಸಿ ಆದೇಶಿಸಿದೆ. ಸದರಿ ಅಧಿಕಾರಿ / ನೌಕರರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ-2ಸಿ ಅನ್ವಯವಾಗುವುದಿಲ್ಲ ಮತ್ತು ಇವರಿಗೆ ಅದೇ ನಿಯಮಾವಳಿಯ ನಾಲ್ಕನೇಯ ಅಧ್ಯಾಯ ಅನ್ವಯವಾಗತಕ್ಕದ್ದು.

ಕ್ರ. ಸಂ.	ಅಧಿಕಾರಿಯವರ ಹೆಸರು, ಪದನಾಮ, ಹುದ್ದೆ ಮತ್ತು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಇಲಾಖೆ (ಶ್ರೀ / ಶ್ರೀಮತಿ)	ಎನ್.ಪಿ.ಎಸ್ ಪ್ರಾನ್ ಖಾತೆ ಸಂಖ್ಯೆ	ಕೆ.ಜಿ.ಐ.ಡಿ ಸಂಖ್ಯೆ
1	ಡಾ: ಮೋನಪ್ಪ ಸಾಯಬಣ್ಣ ಸಿರವಾಳ, ಸಹಾಯಕ ಖಜಾನಾಧಿಕಾರಿ, ಪತ್ರಾಂಕಿತ ಉಪ ಖಜಾನೆ, ಶಹಾಪುರ, ಯಾದಗಿರಿ ಜಿಲ್ಲೆ	**110070922077**	**2134874**

ಡಿಫೈನ್ಡ್ ಪಿಂಚಣಿ ಯೋಜನೆಯ ವ್ಯಾಪ್ತಿಗೊಳಪಡುವ ಮೇಲ್ಕಂಡ ಸರ್ಕಾರಿ ಅಧಿಕಾರಿ / ನೌಕರರ ಎನ್.ಪಿ.ಎಸ್ ಪ್ರಾನ್ ಖಾತೆಯಲ್ಲಿ ಜಮೆಯಾಗಿರುವ ಸರ್ಕಾರದ ಹಾಗೂ ನೌಕರರ ವಂತಿಗೆಗಳನ್ನು ಹಿಂಪಡೆದು ಇತ್ಯರ್ಥಿಪಡಿಸಲು ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/99/2023, ದಿನಾಂಕ: 14-02-2025 ರಲ್ಲಿನ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ-ಪಿಇಎನ್/35/2026, ದಿನಾಂಕ: 16-02-2026 ರಲ್ಲಿನ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರವಿಪ್ರಕಾಶ್. ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ & ಮುಂಗಡಗಳು)

PR-216

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದಿನಾಂಕ: 01-04-2006ರ ಪೂರ್ವದಲ್ಲಿನ ನೇಮಕಾತಿ ಅಧಿಸೂಚನೆ ಮೂಲಕ ಆಯ್ಕೆ ಹೊಂದಿ ಆ ದಿನಾಂಕದಂದು ಅಥವಾ ನಂತರದಲ್ಲಿ ರಾಜ್ಯ ಸರ್ಕಾರದ ಸೇವೆಗೆ ಸೇರಿದ ನೌಕರರನ್ನು ಹಿಂದಿನ ಡಿಫೈನ್ಡ್ ಪಿಂಚಣಿ ಯೋಜನೆಗೆ ಒಳಪಡಿಸುವ ಕುರಿತು

ಓದಲಾಗಿದೆ: 1) ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/99/2023, ದಿನಾಂಕ: 24-01-2024

2) ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/99/2023, ದಿನಾಂಕ: 14-02-2025 ಮತ್ತು 13-10-2025

3) ಖಜಾನೆ ಆಯುಕ್ತರ ಪತ್ರ ಸಂಖ್ಯೆ: ಖನಿ/ಸಿಬ್ಬಂದಿ(1)/ಸಿಆರ್ 31/2024-25, ದಿನಾಂಕ: 30-08-2024

ಪ್ರಸ್ತಾವನೆ:

ದಿನಾಂಕ: 01-04-2006ರ ಪೂರ್ವದಲ್ಲಿನ ನೇಮಕಾತಿ ಅಧಿಸೂಚನೆಗಳ ಮೂಲಕ ಆಯ್ಕೆ ಹೊಂದಿ ಆ ದಿನಾಂಕದಂದು ಅಥವಾ ನಂತರದಲ್ಲಿ ರಾಜ್ಯ ಸರ್ಕಾರದ ಸೇವೆಗೆ ಸೇರಿದ ನೌಕರರನ್ನು ಹಿಂದಿನ ಡಿಫೈನ್ಡ್ ಪಿಂಚಣಿ ಯೋಜನೆಗೆ ಒಳಪಡಿಸಲು ಸರ್ಕಾರವು ಒಪ್ಪಿಗೆಯನ್ನು ನೀಡಿ ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಆದೇಶವನ್ನು ಹೊರಡಿಸಲಾಗಿರುತ್ತದೆ. ಈ ಆದೇಶದ ವ್ಯಾಪ್ತಿಗೊಳಪಡುವ ಸರ್ಕಾರಿ ನೌಕರರಿಂದ ದಿನಾಂಕ: 30-06-2024 ರೊಳಗೆ ಅಭಿಮತವನ್ನು ಪಡೆದು ಕ್ರೋಢೀಕೃತ ಪ್ರಸ್ತಾವನೆಯನ್ನು ಸರ್ಕಾರದ ಪರಿಶೀಲನೆಗಾಗಿ ಸಲ್ಲಿಸುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ನಿರ್ದೇಶನ ನೀಡಲಾಗಿದೆ.

ಮುಂದುವರೆದು, ದಿನಾಂಕ: 24-01-2024ರ ಸರ್ಕಾರಿ ಆದೇಶದನ್ವಯ ಡಿಫೈನ್ಡ್ ಪಿಂಚಣಿ ಯೋಜನೆ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಅಧಿಕಾರಿ / ನೌಕರರ ಎನ್.ಪಿ.ಎಸ್ ಪ್ರಾನ್ ಖಾತೆಯಲ್ಲಿ ಜಮೆಯಾಗಿರುವ ಸರ್ಕಾರದ ಹಾಗೂ ನೌಕರರ ವಂತಿಗೆಗಳನ್ನು ಹಿಂಪಡೆದು ಇತ್ಯರ್ಥಪಡಿಸಲು ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಆದೇಶಗಳಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರ ಖಜಾನೆ ಆಯುಕ್ತರ ಪತ್ರದಲ್ಲಿ ಖಜಾನೆ ಇಲಾಖೆಯ ಒಟ್ಟು 60 ಅಧಿಕಾರಿ / ನೌಕರರನ್ನು ದಿನಾಂಕ: 24-01-2024ರ ಆದೇಶದನ್ವಯ ರಾಷ್ಟ್ರೀಯ ಪಿಂಚಣಿ ಯೋಜನೆಯಿಂದ ಹಿಂದಿನ ಡಿಫೈನ್ಡ್ ಪಿಂಚಣಿ ಯೋಜನೆಗೆ ಒಳಪಡಿಸಿ ಆದೇಶ ಹೊರಡಿಸಲು ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಅದರಂತೆ, ದಿನಾಂಕ: 24-01-2024ರ ಸರ್ಕಾರಿ ಆದೇಶದನ್ವಯ ಸಂಬಂಧಿತ ಅಧಿಕಾರಿ / ನೌಕರರು ಚಲಾಯಿಸಿದ ಅಭಿಮತವನ್ನು ಪರಿಶೀಲಿಸಿದ ಸರ್ಕಾರವು ದಿನಾಂಕ: 01-04-2006ರ ಪೂರ್ವದಲ್ಲಿನ ನೇಮಕಾತಿ ಅಧಿಸೂಚನೆಗಳ ಮೂಲಕ ಆಯ್ಕೆ ಹೊಂದಿ ಆ ದಿನಾಂಕದಂದು ಅಥವಾ ನಂತರದಲ್ಲಿ ರಾಜ್ಯ ಸರ್ಕಾರದ ಸೇವೆಗೆ ಸೇರಿದ ಖಜಾನೆ ಇಲಾಖೆಯ ರಾಷ್ಟ್ರೀಯ ಪಿಂಚಣಿ ಯೋಜನೆಗೊಳಪಟ್ಟ ಅಧಿಕಾರಿ / ನೌಕರರನ್ನು ಹಳೆಯ ಡಿಫೈನ್ಡ್ ಪಿಂಚಣಿ ಯೋಜನೆಗೆ ಒಳಪಡಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಇ 38 ಆಖಇ 2025, ದಿನಾಂಕ: 24-04-2026

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ರಾಷ್ಟ್ರೀಯ ಪಿಂಚಣಿ ಯೋಜನೆಗೊಳಪಟ್ಟ ಖಜಾನೆ ಇಲಾಖೆಯ ಈ ಕೆಳಕಂಡ ಅಧಿಕಾರಿ / ನೌಕರರು ದಿನಾಂಕ: 01-04-2006ರ ಪೂರ್ವದಲ್ಲಿ ನೇಮಕಾತಿ ಅಧಿಸೂಚನೆಗಳ ಮೂಲಕ ಆಯ್ಕೆ ಹೊಂದಿ ಆ ದಿನಾಂಕದಂದು ಅಥವಾ ನಂತರದಲ್ಲಿ ರಾಜ್ಯ ಸರ್ಕಾರದ ಸೇವೆಗೆ ಸೇರಿರುವುದರಿಂದ ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/99/2023, ದಿನಾಂಕ: 24-01-2024 ರನ್ವಯ ಅವರನ್ನು ಡಿಫೈನ್ಡ್ ಪಿಂಚಣಿ ಯೋಜನೆಯ ವ್ಯಾಪ್ತಿಗೊಳಪಡಿಸಿ ಆದೇಶಿಸಿದೆ. ಸದರಿ ಅಧಿಕಾರಿ / ನೌಕರರಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ-2ಸಿ ಅನ್ವಯವಾಗುವುದಿಲ್ಲ ಮತ್ತು ಇವರಿಗೆ ಅದೇ ನಿಯಮಾವಳಿಯ ಭಾಗ-IV ನಾಲ್ಕನೇಯ ಅಧ್ಯಾಯ ಅನ್ವಯವಾಗತಕ್ಕದ್ದು.

ಕ್ರ. ಸಂ.	ಅಧಿಕಾರಿ / ನೌಕರರ ಹೆಸರು ಮತ್ತು ಪದನಾಮ (ಶ್ರೀ / ಶ್ರೀಮತಿ)	ಕೆ.ಜಿ.ಐ.ಡಿ ಸಂಖ್ಯೆ	ಎನ್.ಪಿ.ಎಸ್ ಪ್ರಾನ್ ಸಂಖ್ಯೆ
1	ರಾಜಣ್ಣ ಎಂ.ಆರ್, ಉಪ ನಿರ್ದೇಶಕರು	2159591	110060843288
2	ಕವಿತ ಟಿ.ಜೆ., ಉಪ ನಿರ್ದೇಶಕರು	2036051	110090840851
3	ನಟರಾಜ.ಹೆಚ್.ಆರ್, ದ್ವಿತೀಯ ದರ್ಜೆ ಸಹಾಯಕರು	2380073	110010848633
4	ರಘು.ಕೆ.ಸಿ, ದ್ವಿತೀಯ ದರ್ಜೆ ಸಹಾಯಕರು	2022032	110030900969
5	ಭವಾನಿ.ಹೆಚ್.ಎನ್. ದ್ವಿತೀಯ ದರ್ಜೆ ಸಹಾಯಕರು	2160444	110020888153
6	ಪ್ರೇಮಲತಾ.ಎಂ, ದ್ವಿತೀಯ ದರ್ಜೆ ಸಹಾಯಕರು	1972223	110060843484

7	ರಾಜಪ್ಪ.ಟಿ, ದ್ವಿತೀಯ ದರ್ಜೆ ಸಹಾಯಕರು	2177704	110010866128
8	ನರಸಿಂಹ ಮೂರ್ತಿ.ಜಿ, ದ್ವಿತೀಯ ದರ್ಜೆ ಸಹಾಯಕರು	2410119	110070866190
9	ವೇದಾಂತ.ವಿ, ದ್ವಿತೀಯ ದರ್ಜೆ ಸಹಾಯಕರು	2353646	110010901010
10	ಸುರೇಖಾ ಬಿ ಮದಿಹಳ್ಳಿ, ದ್ವಿತೀಯ ದರ್ಜೆ ಸಹಾಯಕರು	2180354	110040857273
11	ಅನಿತಾ.ಎಂ, ದ್ವಿತೀಯ ದರ್ಜೆ ಸಹಾಯಕರು	2033144	110070901293
12	ರೂಪಾ.ಎಂ.ಆರ್, ದ್ವಿತೀಯ ದರ್ಜೆ ಸಹಾಯಕರು	2410667	110000843490
13	ಗಣೇಶ ಯು.ಶೇಟ್, ದ್ವಿತೀಯ ದರ್ಜೆ ಸಹಾಯಕರು	2188351	11000083722
14	ಪ್ರಭಾಕರ, ದ್ವಿತೀಯ ದರ್ಜೆ ಸಹಾಯಕರು	2092101	110080865984
15	ಮೋಹನ.ಜಿ.ಕೆ, ದ್ವಿತೀಯ ದರ್ಜೆ ಸಹಾಯಕರು	2094084	110070846716
16	ಸುನೀಲ ಕುಮಾರ.ಜಿ, ದ್ವಿತೀಯ ದರ್ಜೆ ಸಹಾಯಕರು	2265309	110010867800
17	ಶರಣಬಸಪ್ಪ, ದ್ವಿತೀಯ ದರ್ಜೆ ಸಹಾಯಕರು	1997047	110040861372
18	ಎನ್.ಇ.ಸುರೇಶ್‌ಕುಮಾರ್, ದ್ವಿತೀಯ ದರ್ಜೆ ಸಹಾಯಕರು	2241156	110050863503
19	ವೇದಾವತಿ, ದ್ವಿತೀಯ ದರ್ಜೆ ಸಹಾಯಕರು	2145372	110010860314
20	ಅಶ್ವಿನ್.ಎಂ, ದ್ವಿತೀಯ ದರ್ಜೆ ಸಹಾಯಕರು	2241360	110000828293
21	ಎಂ.ಸೋಮಲಿಂಗಪ್ಪ, ದ್ವಿತೀಯ ದರ್ಜೆ ಸಹಾಯಕರು	2230711	110070870952
22	ಬೇಬಿ.ಎನ್.ಎಸ್, ದ್ವಿತೀಯ ದರ್ಜೆ ಸಹಾಯಕರು	1814537	110060829844
23	ವಿಜಯಕುಮಾರ್.ಕೆ.ಎಸ್, ದ್ವಿತೀಯ ದರ್ಜೆ ಸಹಾಯಕರು	1924845	110030863700
24	ಅಹಲ್ಯ.ಎ.ಎಸ್, ದ್ವಿತೀಯ ದರ್ಜೆ ಸಹಾಯಕರು	2074327	110060927076
25	ಗಣೇಶ.ಹೆಚ್.ಎಂ,	2152732	110080835481

	ದ್ವಿತೀಯ ದರ್ಜೆ ಸಹಾಯಕರು		
26	ಸತ್ಯಬೋಧ.ಜೆ, ದ್ವಿತೀಯ ದರ್ಜೆ ಸಹಾಯಕರು	2260638	110090866608
27	ಪದ್ಮನಾಭ ಶಿವಪ್ಪ ಉಪ್ಪಾರ, ದ್ವಿತೀಯ ದರ್ಜೆ ಸಹಾಯಕರು	2074326	110040927080
28	ಸುಧಾ.ಎಂ.ಸಿ, ದ್ವಿತೀಯ ದರ್ಜೆ ಸಹಾಯಕರು	2094918	110040853160
29	ಪುಷ್ಪ ಬಾಯಿ, ದ್ವಿತೀಯ ದರ್ಜೆ ಸಹಾಯಕರು	1960106	111000861738
30	ಸುಮತಿ.ಹೆಚ್.ಪಿ, ದ್ವಿತೀಯ ದರ್ಜೆ ಸಹಾಯಕರು	2076400	110020927078
31	ರೇಣುಕಾ.ಪಿ, ದ್ವಿತೀಯ ದರ್ಜೆ ಸಹಾಯಕರು	2148690	110080854600
32	ಅಫೀಫಾ ಶಾಹೀನ್ ಜಕಾತಿ, ದ್ವಿತೀಯ ದರ್ಜೆ ಸಹಾಯಕರು	2231716	110010828253
33	ಕಮಲಾಕ್ಷಿ.ಎಸ್, ದ್ವಿತೀಯ ದರ್ಜೆ ಸಹಾಯಕರು	2056320	110010840385
34	ತಿಲಕ ಕುಮಾರ.ಕೆ.ಜಿ, ದ್ವಿತೀಯ ದರ್ಜೆ ಸಹಾಯಕರು	1719795	110040866233
35	ಕೆ.ಎಂ.ಲೀಲಾವತಿ, ದ್ವಿತೀಯ ದರ್ಜೆ ಸಹಾಯಕರು	1720273	110000842744
36	ಶಿಕ್ರೇಶ್ವರ, ದ್ವಿತೀಯ ದರ್ಜೆ ಸಹಾಯಕರು	2143230	110080922992
37	ರಾಯಪ್ಪ, ದ್ವಿತೀಯ ದರ್ಜೆ ಸಹಾಯಕರು	2141386	110070923147
38	ಹನುಮಂತಪ್ಪ, ದ್ವಿತೀಯ ದರ್ಜೆ ಸಹಾಯಕರು	2114285	110090839344
39	ವಿನೋದ ಹರಿಕಾಂತ, ದ್ವಿತೀಯ ದರ್ಜೆ ಸಹಾಯಕರು	2116217	111000876529
40	ಶರಣಮ್ಮ, ದ್ವಿತೀಯ ದರ್ಜೆ ಸಹಾಯಕರು	2281002	110040902941
41	ಇರ್ಶಾದ್ ಅಹ್ಮದ್ ಅಸ್ಲಂ ಪೀರ್ಜದೆ, ದ್ವಿತೀಯ ದರ್ಜೆ ಸಹಾಯಕರು	2284790	110050838410
42	ರಮೇಶ ಪಾದನಕಟ್ಟಿ, ದ್ವಿತೀಯ ದರ್ಜೆ ಸಹಾಯಕರು	2004255	110070871437
43	ಮಲ್ಲಿಕಾರ್ಜುನ ಪಟ್ಟದಕಲ್ಲು, ದ್ವಿತೀಯ ದರ್ಜೆ ಸಹಾಯಕರು	2273539	110080850188

44	ಮೋಹನ್.ಪಿ.ಸಿ, ದ್ವಿತೀಯ ದರ್ಜೆ ಸಹಾಯಕರು	1799204	110010854027
45	ನಿಂಗಪ್ಪ ಬಿರಾದರ್, ದ್ವಿತೀಯ ದರ್ಜೆ ಸಹಾಯಕರು	2221680	110080872272
46	ಗೋವರ್ಧನ್.ಬಿ, ದ್ವಿತೀಯ ದರ್ಜೆ ಸಹಾಯಕರು	1798305	110040836469
47	ಅರವಿಂದ ಎಸ್ ಸಾಲಿಗೌಡರ, ದ್ವಿತೀಯ ದರ್ಜೆ ಸಹಾಯಕರು	2004973	110020827739
48	ಬಿರಾದರ ಮಲ್ಲಪ್ಪ ಶ್ರೀಶೈಲ, ದ್ವಿತೀಯ ದರ್ಜೆ ಸಹಾಯಕರು	2583378	110020850082
49	ಶೋಭಾ ಬಿ ಕಿತ್ತೂರು, ದ್ವಿತೀಯ ದರ್ಜೆ ಸಹಾಯಕರು	2004974	110030873031
50	ಶಿವನಂದ ಸಜ್ಜನ, ದ್ವಿತೀಯ ದರ್ಜೆ ಸಹಾಯಕರು	2168692	110030889049
51	ಗೊಂದಿ ರಾಮಪ್ಪ , ದ್ವಿತೀಯ ದರ್ಜೆ ಸಹಾಯಕರು	1799967	110050852159
52	ಶೋಭಾ ಶೆಟ್ಟಿ, ದ್ವಿತೀಯ ದರ್ಜೆ ಸಹಾಯಕರು	2052009	110030873921
53	ಇಬ್ರಾಹಿಂ ಹುಸೇನ್ ಇಟಗಿ, ದ್ವಿತೀಯ ದರ್ಜೆ ಸಹಾಯಕರು	2254532	110090840249
54	ವೀರಭದ್ರಪ್ಪ ಡಿ ಕಟಕೋಳ, ದ್ವಿತೀಯ ದರ್ಜೆ ಸಹಾಯಕರು	2277202	110010868882
55	ಪೃಥ್ವಿಕುಮಾರ್.ಕೆ.ಬಿ, ದ್ವಿತೀಯ ದರ್ಜೆ ಸಹಾಯಕರು	1799538	110060851679
56	ಸುರೇಖಾ ಶೇಟ್, ದ್ವಿತೀಯ ದರ್ಜೆ ಸಹಾಯಕರು	2052736	111000871444
57	ಶ್ವೇತಾ.ಬಿ.ಎಂ, ದ್ವಿತೀಯ ದರ್ಜೆ ಸಹಾಯಕರು	1799207	110090902331
58	ಪೂರ್ಣಿಮಾ.ಕೆ.ಎನ್, ದ್ವಿತೀಯ ದರ್ಜೆ ಸಹಾಯಕರು	2167486	110080874958
59	ಟಿ.ಹೆಚ್.ವೆಂಕಟೇಶ, ದ್ವಿತೀಯ ದರ್ಜೆ ಸಹಾಯಕರು	2402547	110030873885

ಡಿಫೈನ್ಡ್ ಪಿಂಚಣಿ ಯೋಜನೆಯ ವ್ಯಾಪ್ತಿಗೊಳಪಡುವ ಮೇಲ್ಕಂಡ ಸರ್ಕಾರಿ ಅಧಿಕಾರಿ / ನೌಕರರ ಎನ್.ಪಿ.ಎಸ್ ಪ್ರಾನ್ ಖಾತೆಯಲ್ಲಿ ಜಮೆಯಾಗಿರುವ ಸರ್ಕಾರದ ಹಾಗೂ ನೌಕರರ ವಂತಿಗೆಗಳನ್ನು ಹಿಂಪಡೆದು ಇತ್ಯರ್ಥಿಪಡಿಸಲು ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/99/2023, ದಿನಾಂಕ: 14-02-2025 ರಲ್ಲಿನ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ-ಪಿಇಎನ್/43/2026, ದಿನಾಂಕ: 18-03-2026 ರಲ್ಲಿನ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರವಿಪ್ರಕಾಶ್. ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ & ಮುಂಗಡಗಳು)

PR-217

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಅಪರ ಜಿಲ್ಲಾಧಿಕಾರಿಗಳನ್ನು ವಿಶೇಷ ಜಿಲ್ಲಾಧಿಕಾರಿಗಳನ್ನಾಗಿ ನೇಮಿಸಿ ಹೊರಡಿಸಿರುವ ಆದೇಶಗಳನ್ನು ಹಿಂಪಡೆಯುವ ಬಗ್ಗೆ.

ಉಲ್ಲೇಖ:-
1. ಸರ್ಕಾರದ ಆದೇಶ ಸಂಖ್ಯೆ:ಕಂಇ 182 ಎಎಸ್‌ಡಿ 2022, ದಿನಾಂಕ:07.06.2022.
2. ಸರ್ಕಾರದ ಆದೇಶ ಸಂಖ್ಯೆ:ಕಂಇ 160 ಟಿಆರ್‌ಎಂ 2025, ದಿನಾಂಕ:01.12.2025.
3. ಸರ್ಕಾರದ ಆದೇಶ ಸಂಖ್ಯೆ:ಕಂಇ 192 ಟಿಆರ್‌ಎಂ 2025 (E-1994055), ದಿನಾಂಕ:16.01.2026.
4. ಸರ್ಕಾರದ ಆದೇಶ ಸಂಖ್ಯೆ:ಕಂಇ 189 ಎಎಸ್‌ಡಿ 2025 (E-1991273), ದಿನಾಂಕ:16.01.2026.

ಪ್ರಸ್ತಾವನೆ:-

ಮೇಲೆ ಓದಲಾದ (1)ರ ಸರ್ಕಾರದ ಆದೇಶದಲ್ಲಿ ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ಹಾಸನ, ಮೈಸೂರು, ರಾಮನಗರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಪರ ಜಿಲ್ಲಾಧಿಕಾರಿಗಳನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 136(3)ರ ಅಡಿಯಲ್ಲಿ ಕೆಲಸ ನಿರ್ವಹಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 9ರಡಿಯಲ್ಲಿ ವಿಶೇಷ ಜಿಲ್ಲಾಧಿಕಾರಿಯನ್ನಾಗಿ ನೇಮಿಸಿ, ಮುಂದಿನ ಆದೇಶದವರೆಗೆ ಕಾರ್ಯಹಂಚಿಕೆ ಮಾಡಿ ಆದೇಶಿಸಲಾಗಿದೆ.

ಮೇಲೆ ಓದಲಾದ (2), (3) ಮತ್ತು (4)ರ ಆದೇಶಗಳಲ್ಲಿ ಚಿಕ್ಕಮಗಳೂರು, ಹಾಸನ ಮತ್ತು ರಾಮನಗರ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ ಕಂಇ 182 ಎಎಸ್‌ಡಿ 2022, ದಿನಾಂಕ 07.06.2022ರಲ್ಲಿ ಅಧಿಕಾರ ಪ್ರತ್ಯಾಯೋಜಿಸಿ ಕಾರ್ಯಹಂಚಿಕೆ ಮಾಡಿರುವುದನ್ನು ಹಿಂಪಡೆದು, ಕ್ರಮವಾಗಿ ಚಿಕ್ಕಮಗಳೂರು, ಹಾಸನ ಮತ್ತು ರಾಮನಗರ ಜಿಲ್ಲೆಗಳ ವಿಶೇಷ ಜಿಲ್ಲಾಧಿಕಾರಿಗಳ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಮತ್ತು ಮುಂದೆ ದಾಖಲಾಗುವ ಎಲ್ಲಾ ಪ್ರಕರಣಗಳನ್ನು ಜಿಲ್ಲಾಧಿಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಗೊಳಿಸಿ ಇತ್ಯರ್ಥಪಡಿಸಲು ಆದೇಶಿಸಲಾಗಿದೆ.

ಅದರಂತೆ ಸರ್ಕಾರದ ಹಂತದಲ್ಲಿ ಪರಿಶೀಲಿಸಿ, ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ಹಾಸನ, ಮೈಸೂರು, ರಾಮನಗರ ಮತ್ತು ತುಮಕೂರು ಜಿಲ್ಲೆಗಳಿಗೆ ಸಂಬಂಧಿಸಿದಂತೆಯೂ ಸರ್ಕಾರದ ಆದೇಶ ಸಂಖ್ಯೆ ಕಂಇ 182 ಎಎಸ್‌ಡಿ 2022, ದಿನಾಂಕ

07.06.2022ರಲ್ಲಿ ಅಧಿಕಾರ ಪ್ರತ್ಯಾಯೋಜಿಸಿ ಕಾರ್ಯಹಂಚಿಕೆ ಮಾಡಿರುವುದನ್ನು ಹಿಂಪಡೆಯಲು ನಿರ್ಣಯಿಸಲಾಗಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಂಇ 160 ಟಿಆರ್‌ಎಂ 2025(e-1949197)
ಬೆಂಗಳೂರು, ದಿನಾಂಕ:16.01.2026.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ , ಸರ್ಕಾರದ ಆದೇಶ ಸಂಖ್ಯೆ: ಕಂಇ 182 ಎಎಸ್‌ಡಿ 2022, ದಿನಾಂಕ 07.06.2022ರಲ್ಲಿ ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ಹಾಸನ, ಮೈಸೂರು, ರಾಮನಗರ ಮತ್ತು ತುಮಕೂರು ಜಿಲ್ಲೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 9ರಡಿಯಲ್ಲಿ ಅಧಿಕಾರ ಪ್ರತ್ಯಾಯೋಜಿಸಿ ಕಾರ್ಯಹಂಚಿಕೆ ಮಾಡಿರುವುದನ್ನು ಹಿಂಪಡೆದು, ಕ್ರಮವಾಗಿ ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ಹಾಸನ, ಮೈಸೂರು, ರಾಮನಗರ ಮತ್ತು ತುಮಕೂರು ಜಿಲ್ಲೆಗಳ ವಿಶೇಷ ಜಿಲ್ಲಾಧಿಕಾರಿ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಮತ್ತು ಮುಂದೆ ದಾಖಲಾಗುವ ಎಲ್ಲಾ ಪ್ರಕರಣಗಳನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಗೊಳಿಸಿ, ಇತ್ಯರ್ಥಪಡಿಸಲು ಆದೇಶಿಸಲಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ವಿಮಲಮ್ಮ. ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ಭೂ ಕಂದಾಯ & ಭೂ ಸುಧಾರಣಾ ಕೋಶ)

PR-218

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮುಖ್ಯ ಇಂಜಿನಿಯರ್, ಅಣೆಕಟ್ಟು ಸುರಕ್ಷತಾ ಸಂಸ್ಥೆ, ಬೆಂಗಳೂರು ರವರ ಅಧೀನದಲ್ಲಿನ ಕೇಂದ್ರ ಯಾಂತ್ರಿಕ ಸಂಸ್ಥೆಯನ್ನು ಮುಕ್ತಾಯಗೊಳಿಸಿ, ಸದರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳನ್ನು ಮರು ನಿಯೋಜಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ:PWD 20 PCO 82, Dated:06.01.1984
2. ಸರ್ಕಾರಿ ಆದೇಶ ಸಂಖ್ಯೆ: ಜಸಂಇ:149:ವಿದ್ಯಾಇ:2014, ದಿನಾಂಕ: 13.06.2014.
3. ಸರ್ಕಾರದ ಆದೇಶದ ಸಂಖ್ಯೆ: ಜಸಂಇ 10 ಅಭಯೋ 2017(ಭಾ-3), ದಿನಾಂಕ:10.01.2022

*** *** ***

ಪ್ರಸ್ತಾವನೆ:-

1. ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಲೋಕೋಪಯೋಗಿ ಇಲಾಖೆ ಹಾಗೂ ಜಲಸಂಪನ್ಮೂಲ ಇಲಾಖೆಯ ವ್ಯಾಪ್ತಿಯಲ್ಲಿನ ಯಂತ್ರಗಳು/ವಾಹನಗಳ ನಿರ್ವಹಣೆ, ಬಳಕೆ, ದುರಸ್ತಿ ಹಾಗೂ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಬೆಂಗಳೂರನ್ನು ಕೇಂದ್ರ ಕಛೇರಿಯನ್ನಾಗಿಸಿಕೊಂಡು ಮುಖ್ಯ ಇಂಜಿನಿಯರ್, ಕೇಂದ್ರ ಯಾಂತ್ರಿಕ ಸಂಸ್ಥೆ ವಲಯವನ್ನು ಸ್ಥಾಪಿಸಲಾಗಿರುತ್ತದೆ. ಕೇಂದ್ರ ಯಾಂತ್ರಿಕ ಸಂಸ್ಥೆ, ಬೆಂಗಳೂರು ವಲಯವು 1984 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಪ್ರಸ್ತುತ ಸಕ್ರಿಯ 2 ವಿಭಾಗಗಳು ಮತ್ತು 14 ಉಪ-ವಿಭಾಗಗಳ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತಿದೆ

2. ಮೇಲೆ ಕ್ರಮಾಂಕ (3) ರಲ್ಲಿ ಓದಲಾದ ದಿನಾಂಕ:10.01.2022 ಸರ್ಕಾರದ ಆದೇಶದಲ್ಲಿ ಮುಖ್ಯ ಇಂಜಿನಿಯರ್, ಅಣೆಕಟ್ಟು ಸುರಕ್ಷತಾ ಸಂಸ್ಥೆ (DSO), ಬೆಂಗಳೂರು ಎಂದು ಮತ್ತೊಮ್ಮೆ

ಮರುನಾಮಕರಣ ಮಾಡಿ ದಿನಾಂಕ:13.04.2022 ರಿಂದ ವಿದ್ಯುಕ್ತವಾಗಿ ಸ್ಥಾಪನೆಗೊಳಿಸಿ ಚಾಲ್ತಿಗೊಳಿಸಲಾಗಿದೆ.

3. ಸರ್ಕಾರಿ ವಾಹನಗಳನ್ನು ಸರ್ಕಾರಿ ಸಂಸ್ಥೆಯ ಮೂಲಕ ಕಾರ್ಯನಿರ್ವಹಿಸಬೇಕಾದ ಅವಶ್ಯಕತೆ ಇಲ್ಲದಿರುವುದನ್ನು ಹಾಗೂ ಬಹುತೇಕ ಇಲಾಖೆಗಳಲ್ಲಿನ ವಾಹನಗಳ ನಿರ್ವಹಣೆಯನ್ನು ಖಾಸಗಿ ಏಜೆನ್ಸಿಗಳ ಮೂಲಕ ನಿರ್ವಹಣೆ ಮಾಡುತ್ತಿರುವುದನ್ನು ಸರ್ಕಾರವು ಮನಗಂಡು ಸರ್ಕಾರದ ಸ್ಥಳಾವಕಾಶ, ಆಡಳಿತಾತ್ಮಕ ವೆಚ್ಚಗಳು, ಬಿಡಿಭಾಗಗಳ ಪೂರೈಕೆ ಮತ್ತು ವೇತನಗಳಲ್ಲಿನ ಉಳಿತಾಯದ ಹಿತದೃಷ್ಟಿಯಿಂದ ಕೇಂದ್ರ ಯಾಂತ್ರಿಕ ಸಂಸ್ಥೆ, ಬೆಂಗಳೂರು ಕಛೇರಿಯನ್ನು ಒಳಗೊಂಡಂತೆ ಇದರಡಿ ಬರುವ ವಿಭಾಗ / ಉಪ ವಿಭಾಗ ಕಚೇರಿಗಳನ್ನು ಮುಕ್ತಾಯಗೊಳಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಜಸಂಇ 207 ಎಸ್‌ಎಎಸ್ 2026(ಇ),
ಬೆಂಗಳೂರು, ದಿನಾಂಕ:03.06.2026.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೇಂದ್ರ ಯಾಂತ್ರಿಕ ಸಂಸ್ಥೆ, ಬೆಂಗಳೂರು ಈ ಕಛೇರಿಯನ್ನೊಳಗೊಂಡಂತೆ ಇದರಡಿ ಬರುವ ವಿಭಾಗ / ಉಪ ವಿಭಾಗ ಕಚೇರಿಗಳನ್ನು (ಈಗಾಗಲೇ ಸ್ಥಳಾಂತರಿಸಲಾಗಿರುವ ಗೊರೂರು ವಿಭಾಗವನ್ನು ಹೊರತುಪಡಿಸಿ) **ಅನುಬಂಧ-1** ರಲ್ಲಿ ತಿಳಿಸಿರುವ ಹುದ್ದೆಗಳ ಸಮೇತ ಈ ಕೆಳಕಂಡ ಷರತ್ತಿಗೊಳಪಡಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಮುಕ್ತಾಯಗೊಳಿಸಿ ಆದೇಶಿಸಿದೆ.

ಷರತ್ತುಗಳು:-

- ಕೇಂದ್ರ ಯಾಂತ್ರಿಕ ಸಂಸ್ಥೆಯನ್ನೊಳಗೊಂಡಂತೆ ಇದರಡಿ ಬರುವ ವಿಭಾಗ / ಉಪ ವಿಭಾಗ ಕಚೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೂಪ್- 'ಎ' ವೃಂದದ ಅಧಿಕಾರಿಗಳು ಮುಂದಿನ ಸ್ಥಳ ನಿಯುಕ್ತಿಗಾಗಿ ಸರ್ಕಾರದ ಜಲಸಂಪನ್ಮೂಲ ಇಲಾಖೆಯಲ್ಲಿ ಹಾಗೂ ಗ್ರೂಪ್- 'ಬಿ', ಗ್ರೂಪ್- 'ಸಿ' ಮತ್ತು 'ಡಿ' ವೃಂದದ ನೌಕರರು ಮುಂದಿನ ಸ್ಥಳ ನಿಯುಕ್ತಿಗಾಗಿ ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು ಇಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು.

- ಯಾಂತ್ರಿಕ ಸಂಸ್ಥೆ ವ್ಯಾಪ್ತಿಯ ವಿಭಾಗ ಕಚೇರಿಗಳು ಹಾಗೂ ಉಪ ವಿಭಾಗ ಕಛೇರಿಗಳಲ್ಲಿನ ಆಸ್ತಿ ಮತ್ತು ಋಣಭಾರ Tools and Plants ಹಾಗೂ ಸಂಬಂಧಪಟ್ಟ ಎಲ್ಲಾ ಕಡತಗಳನ್ನು **ಅನುಬಂಧ-2** ರಲ್ಲಿ ತಿಳಿಸಲಾದಂತೆ ಆಯಾ ನಿಗಮಗಳಿಗೆ ಹಸ್ತಾಂತರಿಸುವುದು.

- ನಿಗಮಗಳ ಅಡಿಯಲ್ಲಿ ELECTRO MECHANICAL DIV/SUB DIV ಗಳನ್ನು ಸೃಜಿಸುವ ಕುರಿತಂತೆ ಮುಂದಿನ ದಿನಗಳಲ್ಲಿ ನಿಗಮದ ಆಡಳಿತ ಮಂಡಳಿಯ ಅನುಮೋದನೆ ಪಡೆದು ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಕ್ರಮವಹಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಆಇ 242 ಆಕೋ-1/2023 ದಿನಾಂಕ:18.06.2025 ರಲ್ಲಿ ನೀಡಿರುವ ನಿರ್ದೇಶನದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಹರ್ಷ)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸೇವೆಗಳು-ಎ).

PR-219

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 207 ಎಸ್ಎಎಸ್ 2026 (ಇ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ
ಡಾ. ಬಿ.ಆರ್. ಅಂಬೇಡ್ಕರ್ ವೀದಿ
ಬೆಂಗಳೂರು, ದಿನಾಂಕ: 17.06.2026

ತಿದ್ದುಪಡಿ / ಸೇರ್ಪಡೆ ಆದೇಶ

ಕೇಂದ್ರ ಯಾಂತ್ರಿಕ ಸಂಸ್ಥೆ, ಬೆಂಗಳೂರು ಈ ಕಛೇರಿಯನ್ನೊಳಗೊಂಡಂತೆ ಇದರಡಿ ಬರುವ ವಿಭಾಗ / ಉಪ ವಿಭಾಗ ಕಚೇರಿಗಳನ್ನು ಹುದ್ದೆಗಳ ಸಮೇತ ಮುಕ್ತಾಯಗೊಳಿಸಲಾಗಿರುವ **ಸರ್ಕಾರದ ಆದೇಶ ಸಂಖ್ಯೆ: ಜಸಂಇ 207 ಎಸ್ಎಎಸ್ 2026(ಇ), ದಿನಾಂಕ:03.06.2026** ರ ಆದೇಶ ಭಾಗದಲ್ಲಿ **ತಕ್ಷಣದಿಂದ ಜಾರಿಗೆ ಬರುವಂತೆ** ಎಂಬ ಪದದ ಬದಲು **ದಿನಾಂಕ:30.06.2026 ರಿಂದ ಜಾರಿಗೆ ಬರುವಂತೆ** ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಮುಂದುವರೆದು, ಷರತ್ತುಗಳು ಭಾಗದಲ್ಲಿ ಈ ಕೆಳಕಂಡಂತೆ ತಿದ್ದುಪಡಿ / ಸೇರ್ಪಡೆ ಮಾಡಿಕೊಂಡು ಓದಿಕೊಳ್ಳತಕ್ಕದ್ದು.

- ಕೇಂದ್ರ ಯಾಂತ್ರಿಕ ಸಂಸ್ಥೆಯನ್ನೊಳಗೊಂಡಂತೆ ಇದರಡಿ ಬರುವ ವಿಭಾಗ / ಉಪ ವಿಭಾಗ ಕಚೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗ್ರೂಪ್- 'ಎ' ವೃಂದದ ಅಧಿಕಾರಿಗಳು ಮುಂದಿನ ಸ್ಥಳ ನಿಯುಕ್ತಿಗಾಗಿ ಸರ್ಕಾರದ ಜಲಸಂಪನ್ಮೂಲ ಇಲಾಖೆಯಲ್ಲಿ ಹಾಗೂ ಗ್ರೂಪ್- 'ಬಿ', ಗ್ರೂಪ್- 'ಸಿ' ಮತ್ತು 'ಡಿ' ವೃಂದದ ನೌಕರರು ಮುಂದಿನ ಸ್ಥಳ ನಿಯುಕ್ತಿಗಾಗಿ ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು ಇವರ ಕಛೇರಿಯಲ್ಲಿ **ದಿನಾಂಕ:01.07.2026** ರಂದು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು.
- ಯಾಂತ್ರಿಕ ಸಂಸ್ಥೆ ವ್ಯಾಪ್ತಿಯ ವಿಭಾಗ ಕಚೇರಿಗಳು ಹಾಗೂ ಉಪ ವಿಭಾಗ ಕಛೇರಿಗಳಲ್ಲಿನ ಆಸ್ತಿ ಮತ್ತು ಋಣಭಾರ Tools and Plants ಹಾಗೂ ಸಂಬಂಧಪಟ್ಟ ಎಲ್ಲಾ ಕಡತಗಳನ್ನು ನಿಗಮದ ವ್ಯಾಪ್ತಿಗೆ ಹಸ್ತಾಂತರಿಸಿಕೊಳ್ಳಲು ಸಂಬಂಧಪಟ್ಟ ವಿಭಾಗ / ಕಛೇರಿಯ ಮುಖ್ಯಸ್ಥರಿಗೆ ಆಯಾ ನಿಗಮಗಳ ವ್ಯವಸ್ಥಾಪಕ ನಿರ್ದೇಶಕರುಗಳು ಪ್ರತ್ಯೇಕವಾಗಿ ನಿರ್ದೇಶನ ನೀಡತಕ್ಕದ್ದು.

ಇನ್ನುಳಿದಂತೆ ಸರ್ಕಾರದ ಆದೇಶ ಸಂಖ್ಯೆ: ಜಸಂಇ 207 ಎಸ್ಎಎಸ್ 2026(ಇ), ದಿನಾಂಕ:03.06.2026 ರಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ಹರ್ಷ)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸೇವೆಗಳು-ಎ).

PR-220

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH